ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೬, ೨೦೧೨ (ಭಾದ್ರಪದ ೧೫, ಶಕ ವರ್ಷ ೧೯೩೪)	ಸಂಚಿಕೆ ೩೬

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಜಲಸಂಪನ್ಮೂಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸನೀಇ 13 ಅಜಅ 2011, ಬೆಂಗಳೂರು, ದಿನಾಂಕ: 16–08–2012.

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ದಿಪಡಿಸುವ ಮತ್ತು ಅಂತರ್ಜಲ ಅತಿ ಬಳಕೆ ನಿಯಂತ್ರಣ ಮಾಡುವ ಸಲುವಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 (2011ರ ಕರ್ನಾಟಕ ಅಂತರ್ಜಲ ಅಧಿನಿಯಮ ಸಂಖ್ಯೆ 25)ವನ್ನು ದಿನಾಂಕ: 20–06–2011 ರಿಂದ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಜಾರಿಗೆ ತರಲಾಗಿದೆ. ಸದರಿ ಅಧಿನಿಯಮ 3(1) ರನ್ವಯ ದಿನಾಂಕ: 16–03–2012 ರಂದು ಕರ್ನಾಟಕ ಅಂತರ್ಜಲ ಪ್ರಾಧಿಕಾರ ರಚಿಸಲಾಗಿದೆ.

ರಾಜ್ಯದ ಅಂತರ್ಜಲ ಸಂಪನ್ಮೂಲವನ್ನು ಮಾರ್ಚ್ 2009ರ ಅಂತ್ಯಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೇಂದ್ರೀಯ ಅಂತರ್ಜಲ ಮಂಡಳಿಯ ಸಹಯೋಗದೊಂದಿಗೆ ಮೌಲೀಕರಿಸಿದಂತೆ 35 ತಾಲ್ಲೂಕುಗಳನ್ನು ಅಂತರ್ಜಲ ಅತಿ ಬಳಕೆ ಎಂದು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ ಅಂತರ್ಜಲ ಅತಿ ಬಳಕೆ ಮತ್ತು ಜಲಮಟ್ಟ ಕುಸಿತವನ್ನು ತಡೆಯಲು ಜಾರಿಗೊಳಿಸಲಾದ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳಿ 2012ನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಮಾರ್ಚ್ 2009ರ ಅಂತ್ಯಕ್ಕೆ ರಾಜ್ಯದ ಅಂತರ್ಜಲ ಸಂಪನ್ಮೂಲವನ್ನು ಮೌಲೀಕರಿಸಿ ಅಂತರ್ಜಲ ಅತಿ ಬಳಕೆ ಪ್ರದೇಶಗಳೆಂದು ವರ್ಗೀಕರಿಸಿದ ಈ ಕೆಳಕಂಡ 35 ತಾಲ್ಲೂಕುಗಳನ್ನು ಸದರಿ ಅಧಿನಿಯಮದ ಪ್ರಕರಣ 10(3) ರಡಿ ಪ್ರದತ್ತವಾದ ಅಧಿಕಾರದನ್ವಯ ಮತ್ತು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ರಡಿ ರಚಿಸಲಾದ ಕರ್ನಾಟಕ ಅಂತರ್ಜಲ ಪ್ರಾಧಿಕಾರ ಸಭೆಯ ದಿನಾಂಕ: 19–06–2012 ರಲ್ಲಿ ಅಂತರ್ಜಲ ಅತಿ ಬಳಕೆಯ ತಾಲ್ಲೂಕುಗಳೆಂದು ಗುರುತಿಸಿರುವ 35 ತಾಲ್ಲೂಕುಗಳಲ್ಲಿ ಅಂತರ್ಜಲ ಅಧಿನಿಯಮವನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿ, ದಿನಾಂಕ: 03–12–2012 ರಿಂದ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ.

ಕ್ರ.ಸಂ.	ತಾಲ್ಲೂಕು	ಜಿಲ್ಲೆ
1.	ಬಾದಾಮಿ	ಬಾಗಲಕೋಟೆ
2.	ಬಾಗಲಕೋಟೆ	

ಕ್ರಸಂ.	ತಾಲ್ಲೂಕು	ಜಿಲ್ಲೆ
3.	ದೇವನಹಳ್ಳಿ	ಬೆಂಗಳೂರು ಗ್ರಾಮಾಂತರ
4.	ದೊಡ್ಡ ಬಳ್ಳಾಪುರ	
5.	ಹೊಸಕೋಟೆ	
6.	ನೆಲಮಂಗಲ	
7.	ಆನೇಕಲ್	ಬೆಂಗಳೂರು ನಗರ
8.	ಬೆಂಗಳೂರು ಪೂರ್ವ	
9.	ಬೆಂಗಳೂರು ಉತ್ತರ	
10.	ಬೆಂಗಳೂರು ದಕ್ಷಿಣ	
11.	ಅಥಣಿ	ಬೆಳಗಾವಿ
12.	ಬೈಲಹೊಂಗಲ	
13.	ರಾಮದುರ್ಗ	
14.	ಸವದತ್ತಿ	
15.	ಹಗರಿ ಬೊಮ್ಮನಹಳ್ಳಿ	ಬಳ್ಳಾರಿ
16.	ಹಡಗಲಿ	
17.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
18.	ಚಿಂತಾಮಣಿ	
19.	ಗೌರಿಬಿದನೂರು	
20.	ಗುಡಿಬಂಡೆ	
21.	ಶಿಡ್ಲಘಟ್ಟ	
22.	ಚಿತ್ರದುರ್ಗ	ಚಿತ್ರದುರ್ಗ
23.	ಹೊಳಲ್ಕೆರೆ	
24.	ಜಗಳೂರು	ದಾವಣಗೆರೆ
25.	ಬಂಗಾರಪೇಟೆ	ಕೋಲಾರ
26.	ಕೋಲಾರ	
27.	ಮಾಲೂರು	
28.	ಮುಳಬಾಗಿಲು	
29.	ಶ್ರೀನಿವಾಸಪುರ	
30.	ಯಲಬುರ್ಗ	ಕೊಪ್ಪಳ
31.	ಕನಕಪುರ	ರಾಮನಗರ
32.	ರಾಮನಗರ	
33.	ಚಿಕ್ಕನಾಯ್ಕನಹಳ್ಳಿ	ತುಮಕೂರು
34.	ಕೊರಟಗೆರೆ	
35.	ಮಧುಗಿರಿ	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 581

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 686 ವೆಚ್ಚ–12/12, ಬೆಂಗಳೂರು, ದಿನಾಂಕ: 06.08.2012

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳು, ಹಾಸ್ಟೆಲ್‌ಗಳು ಮತ್ತು ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಷೂಗಳು, ಚಪ್ಪಲಿಗಳು, ಕಾಲು ಚೀಲಗಳು, ಶಾಲಾ ಬ್ಯಾಗ್‌ಗಳು, ಬೆಲ್ಟ್ ಮತ್ತು ಬ್ಯಾಡ್ಜ್‌ಗಳನ್ನು ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಸಂಸ್ಥೆಯಿಂದ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಮಾಜ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಮಾಜ ಕಲ್ಯಾಣ ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕಾಂತ. ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. 588

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 687 ವೆಚ್ಚ–12/12, ಬೆಂಗಳೂರು, ದಿನಾಂಕ: 06.08.2012

ಶ್ರೀ ಬೇಲಕೇರಿ, Retired Court Officer, ಇವರ ಸೇವೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ Consultant Court Officer ಆಗಿ ಮಾಸಿಕ ರೂ.17,000/–ಗಳ ಸಂಚಿತ (Consolidated) ವೇತನದಲ್ಲಿ ಒಂದು ವರ್ಷದ ಅವಧಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕಾಂತ. ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. 587

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 725 ವೆಚ್ಚ–12/12, ಬೆಂಗಳೂರು, ದಿನಾಂಕ: 06.08.2012

ವಾಣಿಜ್ಯ ತೆರಿಗೆ ಇಲಾಖೆಯ ಕಂಪ್ಯೂಟರ್‌ಗಳಿಗೆ 'McAfee' antivirus softwareನ್ನು ವಾರ್ಷಿಕ ರೂ.20.00 ಲಕ್ಷಗಳ ವೆಚ್ಚದಲ್ಲಿ ದಿನಾಂಕ:15.08.2012 ರಿಂದ ಎರಡು ವರ್ಷಗಳ ಅವಧಿಗೆ ಅಳವಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ವಾಣಿಜ್ಯ ತೆರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ತೆರಿಗೆ ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕಾಂತ. ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. 584

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 627 ವೆಚ್ಚ–12/12, ಬೆಂಗಳೂರು, ದಿನಾಂಕ: 06.08.2012

ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ, ಬೆಂಗಳೂರು, ID - Nat Test Kits (Consumables) ಗಳನ್ನು ಪ್ರತಿ ಕಿಟ್‌ಗೆ ರೂ.950/– (ತೆರಿಗೆ ಪ್ರತ್ಯೇಕ)ರ ವೆಚ್ಚದಲ್ಲಿ ನೇರವಾಗಿ M/s.Novartis Diagnostics Pvt Ltd., Indiaದ ಅಂಗ ಸಂಸ್ಥೆಯಾದ Bangalore Medical System, ಬೆಂಗಳೂರು, ಈ ಸಂಸ್ಥೆಯಿಂದ ದಿನಾಂಕ: 31.03.2013ರವರೆಗೆ ಸಂಗ್ರಹಿಸಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ID - Nat Test Kits (Consumables) ಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕಾಂತ. ಎಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. 585

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂ: ಕಾಇ 05 ಕಾಬಾಸೇ 2012, ಬೆಂಗಳೂರು, ದಿನಾಂಕ: 07.08.2012

ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳು 1969 ರ ನಿಯಮ 92(1)ರ ಪರಂತುಕ ಓದಿಕೊಂಡಂತೆ ನಿಯಮ 92(6)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು M/s GE BE Pvt Ltd., ವೈಟ್‌ಫೀಲ್ಡ್, ಬೆಂಗಳೂರು–66, ಈ ಕಾರ್ಖಾನೆಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಕೇವಲ ಒಂದು ಪಾಳಿಯಲ್ಲಿ ವೈದ್ಯಾಧಿಕಾರಿಯವರನ್ನು ನೇಮಿಸಿಕೊಳ್ಳಲು ಸಂಬಂಧಿಸಿದ ನಿಯಮಗಳಿಂದ ವಿನಾಯ್ತಿ ನೀಡಲಾಗಿದೆ.

1. ನಿಯಮ ನಿಗದಿಪಡಿಸಿರುವ ನರ್ಸಿಂಗ್ ಸಿಬ್ಬಂದಿ ನೇಮಕಾತಿಯಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ ಪ್ರತಿ ಪಾಳಿಯಲ್ಲಿ ಆಂಬುಲೆನ್ಸ್ ಕೋಣೆ, ಓರ್ವ ವಿದ್ಯಾರ್ಹತೆಯುಳ್ಳ ನರ್ಸ್ ಅಥವಾ ಡ್ರೆಸ್ಸರ್ ಕಮ್ ಕಾಂಪೌಂಡರ್ ಮತ್ತು ನರ್ಸಿಂಗ್ ಅಟೆಂಡೆಂಟ್ ಇವರುಗಳ ಸುಪರ್ದಿನಲ್ಲಿ ಇರತಕ್ಕದ್ದು.
2. ನೇಮಕ ಮಾಡಿಕೊಂಡಿರುವ ಹಾಗೂ ಹಾಲಿ ಇರುವ ವೈದ್ಯಾಧಿಕಾರಿಯವರು ಕಾರ್ಖಾನೆ ಕೆಲಸ ನಿರ್ವಹಿಸುವ ಸಮಯದಲ್ಲಿ ಅವಶ್ಯಕತೆ ಅನುಸಾರ ಕರೆ ಮಾಡಿದಾಗ ಸದರಿಯವರ ಸೇವೆ ಸಿಗುವಂತಿರಬೇಕು.
3. Tie-up-Hospital ನ ನೇಮಿಸಿಕೊಳ್ಳಲಾದ ವೈದ್ಯಾಧಿಕಾರಿ ಬದಲಾವಣೆಯಾದಲ್ಲಿ ತಕ್ಷಣ ಇಲಾಖೆಗೆ ಮಾಹಿತಿ ನೀಡುವುದು ಮತ್ತು ಇಂತಹ ಬದಲಾವಣೆಯಾದ ಒಂದು ತಿಂಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಿ, ಇಲಾಖೆಯ ಮಂಜೂರಾತಿ ಪಡೆಯುವುದು. ಇದು ಕಾರ್ಯಗತವಾಗದಿದ್ದಲ್ಲಿ ಇದನ್ನು ಕಾನೂನು ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಶಿವರಾಮ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ, (ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. 583

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂ: ಕಾಇ 37 ಕಾಬಾಸೇ 2012, ಬೆಂಗಳೂರು, ದಿನಾಂಕ: 13.07.2012

ದಿ ಇಂಡಿಯನ್ ಬಾಯ್ಲರ್ ಆಕ್ಟ್ 1923 ರ ಅಧಿನಿಯಮ 28(ಎ)(1ಎ)ಎಫ್ ರ ಅನ್ವಯ ಮತ್ತು ಬಾಯ್ಲರ್ ಅಟೆಂಡೆಂಟ್ಸ್ ನಿಯಮಗಳು 2011 ರ ನಿಯಮಗಳು 9(ಎ)(ಬಿ) ಮತ್ತು 10 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು

ಈ ಕೆಳಕಂಡವರನ್ನೊಳಗೊಂಡ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿಯನ್ನು ಅಧಿಸೂಚನೆ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ.ಸಂ.	ಹೆಸರು ಮತ್ತು ವಿಳಾಸ	ಪದನಾಮ
1	ಬಾಯ್ಲರುಗಳ ನಿರ್ದೇಶಕರು, ಕಾರ್ಮಿಕ ಭವನ, ಬೆಂಗಳೂರು	ಪದನಿಮಿತ್ತ ಅಧ್ಯಕ್ಷರು
2	ಬಾಯ್ಲರುಗಳ ಸಹಾಯಕ ನಿರ್ದೇಶಕರು, ಬಿಟಿಟಿಇ ಸೆಲ್, ಕಾರ್ಮಿಕ ಭವನ, ಬೆಂಗಳೂರು	ಕಾರ್ಯದರ್ಶಿ
3	ಶ್ರೀ.ಸುರೇಂದ್ರ ಕುಮಾರ್ ವರ್ಮಾ, ಅಸಿಸ್ಟೆಂಟ್ ವೈಸ್ ಪ್ರೆಸಿಡೆಂಟ್, ಮೆ: ಜುಬಿಲಿಯೆಂಟ್ ಆರ್ಗೋನೋಸಿಸ್ ಲಿ., ನಂಜನಗೂಡು, ಮೈಸೂರು.	ಸದಸ್ಯರು
4	ಶ್ರೀ.ವಿ.ಗೋವಿಂದರಾಜು, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಆಪರೇಷನ್ (ಸ್ಟೀಂ ಪ್ಲಾಂಟ್) ಮೆ:ಇಂಡಾಲ್ಕೋ ಇಂಡಸ್ಟ್ರೀಸ್, ಬೆಳಗಾವಿ.	ಸದಸ್ಯರು
5	ಶ್ರೀ.ಪ್ರಕಾಶ್ ಎಸ್.ದೇಶಪಾಂಡೆ, ಜನರಲ್ ಮೇನೇಜರ್, ಪವರ್ ಪ್ಲಾಂಟ್, ಮೆ: ಕಿರ್ಲೋಸ್ಕರ್ ಫೆರಸ್ ಇಂಡಸ್ಟ್ರೀಸ್ ಲಿ., ಕೊಪ್ಪಳ	ಸದಸ್ಯರು
6	ಶ್ರೀ.ನರೇಂದ್ರಕುಮಾರ್ ಕಾಬ್ರಾ, ಬಿ.107, ಪ್ರಸ್ಟೀಜ್, ಸೇಂಟ್ ಜಾನ್ಸ್ ವುಡ್, ನಂ.80, ತಾವರೆಕೆರೆ ಮುಖ್ಯ ರಸ್ತೆ, ಕೋರಮಂಗಲ, ಬೆಂಗಳೂರು–29.	ಸದಸ್ಯರು
7	ಶ್ರೀ. ನಂಜಯ್ಯ, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಪವರ್ ಪ್ಲಾಂಟ್, ಮೆ: ಮೈಸೂರು ಪೇಪರ್ ಮಿಲ್ಸ್ ಲಿ., ಶಿವಮೊಗ್ಗ.	ಸದಸ್ಯರು
8	ಶ್ರೀ.ಸುಧಾಕರ ಬಾಳಿಗಾ, ಮೆ: ವಿನಾಯಕ ಇಂಜಿನಿಯರಿಂಗ್ ವರ್ಕ್ಸ್, ಮಂಗಳೂರು.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಶಿವರಾಮ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ, (ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. 589

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂ: ಕಾಇ 38 ಕಾಬಾಸೇ 2012, ಬೆಂಗಳೂರು, ದಿನಾಂಕ: 09.08.2012

ದಿ ಇಂಡಿಯನ್ ಬಾಯ್ಲರ್ ಆಕ್ಟ್ 1923 ರ ಅಧಿನಿಯಮ 28(ಎ)(1ಎ)ಎಫ್ ರ ಅನ್ವಯ ಮತ್ತು ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ನಿಯಮಗಳು 2011 ರ ನಿಯಮಗಳು 9(1)(2) ಮತ್ತು 10 ರಲ್ಲಿ ಪ್ರದತ್ತವಾದ ಅಧಿಕಾರದನ್ವಯ, ಕರ್ನಾಟಕ ಸರ್ಕಾರವು ಈ ಕೆಳಕಂಡವರನ್ನೊಳಗೊಂಡ ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿಯನ್ನು ಅಧಿಸೂಚನೆ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪುನರ್ ರಚಿಸಿ ಆದೇಶ ಹೊರಡಿಸಿದೆ.

ಕ್ರ.ಸಂ.	ಹೆಸರು ಮತ್ತು ವಿಳಾಸ	ಪದನಾಮ
1	ಬಾಯ್ಲರುಗಳ ನಿರ್ದೇಶಕರು, ಕಾರ್ಮಿಕ ಭವನ, ಬೆಂಗಳೂರು.	ಪದನಿಮಿತ್ತ ಅಧ್ಯಕ್ಷರು
2	ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ–1, ಕಾರ್ಮಿಕ ಭವನ, ಬೆಂಗಳೂರು.	ಕಾರ್ಯದರ್ಶಿ

ಕ್ರ.ಸಂ.	ಹೆಸರು ಮತ್ತು ವಿಳಾಸ	ಪದನಾಮ
3	ಶ್ರೀ ಪೆದ್ದಣ್ಣ .ಆರ್., ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಮೆ: ಜೆ.ಎಸ್.ಡಬ್ಲ್ಯೂ ಎನರ್ಜಿ ಲಿ., ತೋರಣಗಲ್ಲು, ಬಳ್ಳಾರಿ.	ಸದಸ್ಯರು
4	ಶ್ರೀ ಬಿ.ಎನ್. ಶಂಕರಲಿಂಗೇಗೌಡ, B.E., ANSI, BEO, ಡೋರ್ ನಂ.62/ಎ, 4ನೇ ಅಡ್ಡ ರಸ್ತೆ, ಮೂರನೇ ಹಂತ, ಗೋಕುಲಂ, ಮೈಸೂರು.	ಸದಸ್ಯರು
5	ಶ್ರೀ ಎಂ. ವಿನಯ್ ಕುಮಾರ್, ಜನರಲ್ ಮ್ಯಾನೇಜರ್, ಮೆ:ಎಂ.ಆರ್.ಪಿ.ಎಲ್. ಮಂಗಳೂರು.	ಸದಸ್ಯರು
6	ಶ್ರೀ ಸೂರ್ಯನಾರಾಯಣ ರಾವ್, ಎಕ್ಸಿಕ್ಯೂಟೀವ್ ಇಂಜಿನಿಯರ್, ಮೆ:ಕೆ.ಪಿ.ಸಿ.ಎಲ್., ಆರ್.ಟಿ.ಪಿ.ಎಸ್., ರಾಯಚೂರು.	ಸದಸ್ಯರು
7	ಶ್ರೀ ಎನ್.ಕೆ. ಮಹೇಶ್ವರಿ, ಜಾಯಿಂಟ್ ಜನರಲ್ ಮ್ಯಾನೇಜರ್, ಪವರ್ ಪ್ಲಾಂಟ್, ಮೆ: ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಲಿ., ದಾಂಡೇಲಿ.	ಸದಸ್ಯರು
8	ಶ್ರೀ ಕೆ.ಕೆ. ಪಾರ್ಥಿಬನ್, ಮೆ: ಶ್ರೀದೇವಿ ಬಾಯ್ಲರ ಎಕ್ವಿಪ್‌ಮೆಂಟ್ಸ್ ಅಂಡ್ ಸ್ಪೇರ್ಸ್, ಕಡಬಗೆರೆ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು–562 130.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ. ಶಿವರಾಮ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ, (ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. 593

LABOUR SECRETARIAT

NOTIFICATION

No.LD 39 KABASE 2012, Bangalore, Dated: 05.07.2012.

In exercise of the powers conferred by sub-section(1), (2) and (4) of Section 5 of the Boilers Act, 1923 (Central Act V of 1923) and in super session of all the previous notifications issued in this behalf, the Government of Karnataka, hereby appoints the officers specified in column 2 of the Table below, to be Inspectors for the purpose of the said Act and defined the limits specified in the corresponding entries in column 3 thereof as the local limits within which each officer shall exercise the powers and perform the duties bestowed on them by or under the said act. This shall come into force with immediate effect and until further orders.

Sl.No.	DESIGNATION OF THE OFFICERS	ASSIGNED LOCAL LIMITS
1	Director of Factories and Boilers in Karnataka	Entire State of Karnataka
2	Joint Director of Boilers, Bangalore	1. Entire State of Karnataka for inspection of Boilers having heating surface of 10000 M2 and above. 2. To Perform any other Inspection and duties entrusted to him by the Director of Boilers, Bangalore.
3	Deputy Director of Boilers, Belgaum Division, Belgaum.	1. Inspection of all Boilers, except Boilers of heating surface of 10000 M2 and above in the areas comprising within the Districts of Belgaum, Bijapur and Bagalkot. 2. To perform any other Inspection and duties entrusted to him by the Director of Boilers, Bangalore.

Sl.No.	DESIGNATION OF THE OFFICERS	ASSIGNED LOCAL LIMITS
4	Deputy Director of Boilers, Davangere Division, Davangere.	1. Inspection of all Boilers except Boilers of heating surface of 10000 M2 and above in the areas comprising within the Districts of Bellary, Davangere and Chitradurga excluding the talukas of channagiri and Honnali of Davanagere District and including Ranebennur taluk of Haveri District. 2. To perform any other Inspection and duties entrusted to him by the Director of Boilers, Bangalore.
5	Senior Assistant Director of Boilers, Bangalore Division-1, Bangalore	Inspection of all Boilers except Boilers of heating surface of 10000 M2 and above in the areas comprising within the Districts of Bangalore Urban except Anekal Taluk.
6	Senior Assistant Director of Boilers, Bangalore Division-2, Bangalore	Inspection of all Boilers except Boilers of heating surface of 10000 M2 and above in the areas comprising within the Districts of Bangalore Rural, Ramanagaram, Kolar, Chikkaballapur, Tumkur and Mandya, excluding the talukas of Tiptur and Turuvekere of Tumkur District and excluding the talukas of Pandavapur, Srirangapatna and K.R. Pet of Mandya District and including Anekal taluk of Bangalore Urban Distirct.
7	Senior Assistant Director of Boilers, Mangalore Division, Mangalore.	Inspection of all Boilers except Boilers of heating surface of 10000 M2 and above in the areas comprising within the Districts of Dakshina Kannada, Udupi & Kodagu.
8	Senior Assistant Director of Boilers, Hubli Division, Hubli	Inspection of all Boilers except Boilers of heating surface of 10000 M2 and above in the areas comprising within the Districts of Dharwad, Haveri, Gadag, Uttara Kannada and talukas of Koppal and Gangavathi of Koppal District and excluding Ranebennur Taluk of Haveri District.
9	Assistant Director of Boilers, BTTE Cell, Bangalore	1. To assist the Director of Boilers, Bangalore. 2. To perform any other Inspection and duties entrusted by the Director of Boilers, Bangalore.
10	Assistant Director of Boilers, Mysore Divison, Mysore	Inspection of all Boilers except Boilers of heating surface of 10000 M2 and above in the areas comprising within the Districts of Mysore and Chamarajanagar and talukas of Srirangapatna, Pandavapura and K.R. Pet of Mandya District.
11	Assistant Director of Boilers, Shimoga Division, Shimoga	Inspection of all Boilers except Boilers of heating surface of 10000 M2 and above in the areas comprising within the Districts of Shimoga, Chickamagalur Hassan and including the Talukas of Honnali and Channagiri of Davanagere District and also including the Talukas of Tiptur and Turuvekere of Tumkur District
12	Assistant Director of Boilers, Gulbarga Division, Gulbarga.	Inspection of all Boilers except Boilers of heating surface of 10000 M2 and above in the areas comprising within the Districts of Gulbarga, Yadagiri, Bidar, Raichur and Koppal, except the talukas of Koppal and Gangavathi of Koppal District.

By order and in the name of the Governor of Karnataka

B.Shivarama Gowda

Under Secretary to Government,

Labour Department (Factories and Boilers)

P.R. 590

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 736 ವೆಚ್ಚ –12/12 ಬೆಂಗಳೂರು, ದಿನಾಂಕ: 10ನೇ ಆಗಸ್ಟ್, 2012.

ಶ್ರೀ ಲಕ್ಷ್ಮೀಕಾಂತ ಜಾವರ್, ಇವರನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ.34,500/–ಗಳ ಸಂಚಿತ ಸಮಾಲೋಚನಾ ಶುಲ್ಕದಲ್ಲಿ ದಿನಾಂಕ: 01–06–2012 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ.ಎಸ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ).

ಪಿ.ಆರ್. 586

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 401 ಪಿಪಿಇ 2011 ಬೆಂಗಳೂರು, ದಿನಾಂಕ: 07ನೇ ಆಗಸ್ಟ್, 2012.

ದಂಡ ಪ್ರಕ್ರಿಯಾ ಸಂಹಿತೆ (1978ರ ತಿದ್ದುಪಡಿ ಅಧಿನಿಯಮ) ಮೂಲಕ ತಿದ್ದುಪಡಿಯಾದಂತೆ ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ ಸಂಖ್ಯೆ :2) ಕಲಂ:24ರ ಉಪಕಲಂ(8) ಮತ್ತು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾಷರತ್ತುಗಳು) ನಿಯಮಾವಳಿ 1977ರ ನಿಯಮ 30ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಶಿರಾದ ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿ.ಸಿ.ನಂ. 448/10ರ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಶ್ರೀ ಡಿ.ಎಸ್. ರಾಮಾಂಜನೇಯ, ವಕೀಲರು, ಶ್ರೀ ಅಸೋಸಿಯೇಟ್ಸ್, ಶ್ರೀನಿಧಿ ಕಾಂಪ್ಲೆಕ್ಸ್, ಮಧುಗಿರಿ, ಗೌರಿಬಿದನೂರು ರಸ್ತೆ, ತುಮಕೂರು ಜಿಲ್ಲೆ, ಇವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ವಿಶೇಷ ಸರ್ಕಾರಿ ಅಭಿಯೋಜಕರ ಸಂಭಾವನೆ/ವೆಚ್ಚವನ್ನು ಅರ್ಜಿದಾರರಾದ ಶ್ರೀಮತಿ ಕಲಾವತಿ ಕೋಂ ಎಂ.ಕೆ.ಸುರೇಶ್, ಮುಚ್ಚಿಗರಹಟ್ಟಿ, ಶಿರಾ ಟೌನ್, ತುಮಕೂರು ಜಿಲ್ಲೆ ಇವರೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ.ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–'ಬಿ').

ಪಿ.ಆರ್. 597